 ISSN : 2583-2948

# ಸಂಪಾದಕೀಯ

ಅನುಕರ್ಷ ತ್ರೈಮಾಸಿಕ ಪತ್ರಿಕೆಯು ತಮಗೆಲ್ಲ ತಿಳಿದಿರುವಂತೆ ನಿರಂತರವಾಗಿ ಸಾಹಿತ್ಯಿಕ ಹಾಗೂ ವೈಚಾರಿಕ ಲೇಖನಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ದೇಶದ ವಿವಿಧ ಭಾಗಗಳಲ್ಲಿ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನಾ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಬರಹಗಾರರ ಸಾಹಿತ್ಯ ಕೃಷಿಗೆ ಪತ್ರಿಕೆಯು ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತ ಬಂದಿದೆ.

ಸಾಹಿತ್ಯ ಚಲನಶೀಲ ಸ್ವರೂಪವನ್ನು ಹೊಂದಿದ್ದು, ನಿರಂತರವಾಗಿ ಬದಲಾವಣೆಯಾಗುತ್ತ ಸಾಗುತ್ತದೆ. ಪಂಪನ ಕಾಲದ ಹಳೆಗನ್ನಡ ಸಾಹಿತ್ಯದಿಂದ ಹಿಡಿದು ಸಮಕಾಲೀನ ಬರಹಗಾರರವರೆಗಿನ ಸಾಹಿತ್ಯ ಕೃಷಿಯನ್ನು ಅವಲೋಕಿಸಿದರೆ ಸಾಹಿತ್ಯದ ಸ್ವರೂಪದಲ್ಲಿ ಅಮೂಲಾಗ್ರ ಬದಲಾವಣೆಗಳಾಗಿರುವುದು ನಮಗೆ ಸ್ಪಷ್ಟವಾಗಿ ವಿದಿತವಾಗುತ್ತದೆ.

ಜಗತ್ತಿನ ಪ್ರತಿಯೊಂದು ಭಾಷೆಯು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುತ್ತದೆ ಹಾಗೂ ಆಯಾ ಭಾಷಿಕರ ಅನನ್ಯತೆಯ ದ್ಯೋತಕವಾಗಿರುತ್ತದೆ.

ಮನುಷ್ಯ ತನ್ನ ಜೀವನದಲ್ಲಿ ಹಲವು ಕಾರಣಗಳಿಂದಾಗಿ ತನ್ನ ಮೂಲ ಸ್ಥಾನವನ್ನು ಹೊರತುಪಡಿಸಿ ಹಲವು ಪ್ರದೇಶಗಳಲ್ಲಿ ವಾಸಿಸುತ್ತಾನೆ. ಈ ಕಾರಣಗಳಿಂದಾಗಿ ಹೊಸ ಭಾಷೆಗಳ ಜೊತೆಗೆ ಆತನಿಗೆ ಅನುಸಂಧಾನ ಸಾಧ್ಯವಾಗುತ್ತದೆ. ತನ್ನ ವೃತ್ತಿ ಜೀವನ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ವ್ಯಕ್ತಿಯು ತನ್ನ ಪ್ರದೇಶವನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿ ವಾಸಿಸತೊಡಗಿದಾಗ ಸಹಜವಾಗಿ ಅಲ್ಲಿನ ಸ್ಥಾನಿಕ ಜನರ ಭಾಷೆಯೊಡನೆ ಒಡನಾಟ ಅನಿವಾರ್ಯವಾಗುತ್ತದೆ. ಸುಗಮ ಸಂವಹನಕ್ಕಾಗಿ ಆಗ ಅಲ್ಲಿನ ಭಾಷೆಯನ್ನು ಕಲಿಯಲು ವ್ಯಕ್ತಿಯು ಕಲಿಯಲು ಪ್ರಯತ್ನಿಸುವುದು ಸಹಜವಾದ ಸಂಗತಿ.

ಕರ್ನಾಟಕದ ಸಂದರ್ಭವನ್ನೇ ತೆಗೆದುಕೊಳ್ಳುವುದಾದರೆ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಗಣನೀಯ ಪ್ರಮಾಣದಲ್ಲಿ ಬೇರೆ ರಾಜ್ಯಗಳ ಜನರು ವಾಸ ಮಾಡುತ್ತಿರುವುದರಿಂದ ಸಹಜವಾಗಿ ಇಲ್ಲಿನ ಭಾಷೆಯಾದ ಕನ್ನಡವನ್ನು ಕಲಿಯಲು ಅವರು ಪ್ರಯತ್ನಿಸುತ್ತಾರೆ.

ಕನ್ನಡವನ್ನು ಕಲಿಯಲು ಅನೇಕ ಜನರು ಮುಂದೆ ಬರುತ್ತಿರುವುದು ಸಕಾರಾತ್ಮಕ ಬೆಳವಣಿಗೆ. ನಮ್ಮ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿಯೂ ಸಹಜವಾಗಿ ಎಲ್ಲ ವಿದ್ಯಾ ಸಂಸ್ಥೆಗಳಲ್ಲಿರುವಂತೆ ಉನ್ನತ ಶಿಕ್ಷಣದಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಕನ್ನಡವನ್ನು ಕಲಿಯುವ ಅವಕಾಶವನ್ನು ಕನ್ನಡ ಹಿನ್ನೆಲೆ ಹೊಂದಿರುವ ವಿದ್ಯಾರ್ಥಿಗಳಿಗೆ ಕಲ್ಪಿಸಲಾಗಿದೆ. ಜೊತೆಗೆ ಕನ್ನಡೇತರ ವಿದ್ಯಾರ್ಥಿಗಳಿಗೂ ವ್ಯಾವಹಾರಿಕ ಕನ್ನಡವನ್ನು ಕೂಡ ಕಲಿಸಲಾಗುತ್ತಿದೆ.

ಆಸಕ್ತ ಕನ್ನಡೇತರ ಅಧ್ಯಾಪಕ ಹಾಗೂ ಸಿಬ್ಬಂದಿ ವರ್ಗದವರಿಗೂ ವಾರಾಂತ್ಯದ ತರಗತಿಗಳ ಮೂಲಕ ಕನ್ನಡ ಕಲಿಸುವಂತಹ ಕಾರ್ಯವನ್ನು ಮಾಡಲಾಗುತ್ತಿದೆ.

ಅನ್ಯ ಭಾಷಿಕರಿಗೆ ಕನ್ನಡ ಕಲಿಸುವ ನಿಟ್ಟಿನಲ್ಲಿ ಲಭ್ಯವಿರುವ ಪಠ್ಯಗಳ ಜೊತೆಗೆ ಹೊಸ ಪಠ್ಯಗಳ ರಚನೆಗೆ ನಿರಂತರ ಪ್ರಯತ್ನಗಳು ಸಾಗುತ್ತಿವೆ.

ಮಣಿಪಾಲದಲ್ಲಿ ವಾಸವಾಗಿರುವ ಬಹುಭಾಷಾ ವಿದ್ವಾಂಸ ಡಾ. ಎನ್. ತಿರುಮಲೇಶ್ವರ ಭಟ್ಟರು ಇತ್ತೀಚೆಗೆ ರಚಿಸಿದ 'ಅನ್ಯಭಾಷಿಕರಿಗೆ ಕನ್ನಡ ಪಠ್ಯ' ಎಂಬ ಪುಸ್ತಕವು ಅನ್ಯ ಭಾಷಿಕರಿಗೆ ಕನ್ನಡವನ್ನು ಸುಲಭವಾಗಿ ಸಮರ್ಪಕವಾಗಿ ಕಲಿಸುವ ಉದ್ದೇಶದಿಂದ ರಚನೆ ಮಾಡಿರುವುದು ಗಮನಾರ್ಹ ಸಂಗತಿ.

ಅನುಕರ್ಷ ತ್ರೈಮಾಸಿಕ ಪತ್ರಿಕೆಯ ಪ್ರಸ್ತುತ ಸಂಚಿಕೆಯು ವೈವಿಧ್ಯಮಯ ಸಾಹಿತ್ಯಿಕ ಬರಹಗಳಿಂದ ಕೂಡಿದ್ದು, ಸಹೃದಯಿಗಳಾದ ತಾವು ಇಲ್ಲಿನ ಬರವಣಿಗೆಗಳ ಓದಿ ಪ್ರತಿಕ್ರಿಯಿಸಬೇಕಾಗಿ ಕೋರಿಕೆ. ತಮ್ಮ ಸಲಹೆ ಸೂಚನೆಗಳಿಗೆ ಸದಾ ಸ್ವಾಗತ.

ವಂದನೆಗಳೊಂದಿಗೆ ಡಾ. ವಿವೇಕಾನಂದ ಸಜ್ಜನ